ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:03:ಯುಜಿಸಿ7ನೇ ಪ.ವೇ:ಆಯವ್ಯಯ:2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:27.07.2020

## ಸುತ್ತೋಲೆ

ವಿಷಯ 7ನೇ ವೇತನ ಆಯೋಗದ ಯು.ಜಿ.ಸಿ. ವೇತನ ಶ್ರೇಣಿಯ ವೇತನ ವ್ಯತ್ಯಾಸ ಬಾಕಿ ವಿವರವನ್ನು ನೀಡುವ ಕುರಿತು

ಉಲ್ಲೇಖ ಸರ್ಕಾರದ ಆದೇಶ ಸಂಖ್ಯೆ:ಇಡಿ:483:ಯುಎನ್‌ಇ:2017 ದಿ:16.03.2019

*****

ಕೇಂದ್ರ ಸರ್ಕಾರದ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ 2016ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ಈ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ, ಖಾಸಗಿ ಅನುದಾನಿತ ಪದವಿ ಬಿ.ಎಡ್. ಕಾಲೇಜುಗಳ ಬೋಧಕ ಮತ್ತು ತತ್ಸಮಾನ ಶ್ರೇಣಿಯ ಸಿಬ್ಬಂದಿಗಳಿಗೆ ದಿನಾಂಕ:01.01.2016ರ ರಿಂದ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಿ ಆದೇಶಿಸಿದೆ. ಈ ಸಂಬಂಧ ಈಗಾಗಲೇ ದಿನಾಂಕ:01.01.2016 ರಿಂದ 31.03.2019ರ ಅವಧಿಯ ಯುಜಿಸಿ ಹಿಂಬಾಕಿಯನ್ನು ಪಾವತಿಸಲಾಗಿರುತ್ತದೆ. ಪ್ರಸ್ತುತ 2019-20ನೇ ಸಾಲಿನಲ್ಲಿ ದಿನಾಂಕ 01.04.2019 ರಿಂದ ಯಾವ ತಿಂಗಳ ವರೆಗೆ ಯುಜಿಸಿ ವೇತನ ವ್ಯತ್ಯಾಸ ಬಾಕಿಯನ್ನು ಪಾವತಿಸಲು ಬಾಕಿ ಇರುವ ವಿವರವನ್ನು google form ನಲ್ಲಿ ಅಪ್‌ಲೋಡ್ ಮಾಡಲು ಹಾಗೂ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆ ಅನುಬಂಧ 01 ರಲ್ಲಿ ವಿವರವನ್ನು **xl. Sheet** ನಲ್ಲಿ ಭರ್ತಿಮಾಡಿ ಪ್ರಾಂಶುಪಾಲರ ದೃಢೀಕರಣದೊಂದಿಗೆ google form ನಲ್ಲಿ ಕೂಡಲೇ ಅಪ್‌ಲೋಡ್ ಮಾಡಲು ಸೂಚಿಸಿದೆ. ದಿನಾಂಕ: 28.07.2020 ರಂದು ಬೆಳಗ್ಗೆ 11.00 ಗಂಟೆ ನಂತರ ಅಪ್‌ಲೋಡ್ ಮಾಡಲಾಗುವ ಮಾಹಿತಿಯನ್ನು ಪರಿಗಣಿಸಲಾಗುವುದಿಲ್ಲವೆಂದು ಕಟ್ಟುನಿಟ್ಟಾಗಿ ಸೂಚಿಸಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ

ಪ್ರತಿಯನ್ನು:

1. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕೇಂದ್ರ ಕಛೇರಿ, ಬೆಂಗಳೂರು – ಸುತ್ತೋಲೆಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2. ಕಛೇರಿ ಪ್ರತಿ.

## 2019-20ನೇ ಸಾಲಿನ 7ನೇ ವೇತನ ವ್ಯತ್ಯಾಸದ ವಿವರಗಳು

| ಕ್ರಮ ಸಂಖ್ಯೆ | ಕಾಲೇಜಿನ ಹೆಸರು | ನೌಕರರ ಹೆಸರು | ನೌಕರರ ಕೆ.ಜಿ.ಐ.ಡಿ ಸಂಖ್ಯೆ | 2019-20ನೇ ಸಾಲಿನ 7ನೇ ವೇತನ ವ್ಯತ್ಯಾಸದ ಬಾಕಿ ಯಾವ ತಿಂಗಳಿಂದ ಬಾಕಿ ಇರುತ್ತದೆ. | 2019-20ನೇ ಸಾಲಿನ 7ನೇ ವೇತನ ವ್ಯತ್ಯಾಸದ ಬಾಕಿ ಯಾವ ತಿಂಗಳವರೆಗೆ ಬಾಕಿ ಇರುತ್ತದೆ. | 2019-20ನೇ ಸಾಲಿನಲ್ಲಿ 7ನೇ ವೇತನ ವ್ಯತ್ಯಾಸ ಬಾಕಿ ಇರುವ ಒಟ್ಟು ಮೊತ್ತ |
|---|---|---|---|---|---|---|
| | | | | | | |
| | | | | | | |
| | | | | | | |
| | | | | | | |

2019-20ನೇ ಸಾಲಿನ 7ನೇ ವೇತನ ವ್ಯತ್ಯಾಸದ ಒಟ್ಟು ಬಾಕಿ ಮೊತ್ತ

ಸಹಿ/-
ಪ್ರಾಂಶುಪಾಲರು